ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-5 Issue 4, January-February , 2024, Pp. 16-21.
©*IIMRD*, Mysuru

IIMRD JOURNALS

www.iimrd.com

# ಇಸ್ಲಾಂ ಲೇಖಕರ ದೃಷ್ಟಿಯಲ್ಲಿ ಭಾರತೀಯ ಸಮಾಜ

**ಪ್ರೊ. ವಿಜಯಮಾಲಾ ನಾಗನೂರಿ**
ಎಸ್.ಎಸ್. ಕಲಾ ಮತ್ತು ವಿಜ್ಞಾನ ಮಹಾವಿದ್ಯಾಲಯ, ಸಂಕೇಶ್ವರ

**ಸಾರಾಂಶ: (Abstract)**

*ಸಾಹಿತ್ಯ ಸಮಾಜ ಜೀವನದ ಪ್ರತಿಬಿಂಬ ಅಥವಾ ಸಮಾಜದ ಸಾರ ಎನ್ನಬಹುದು, ಭಾರತೀಯ ಸಮಾಜವೆಂದರೆ ಹಿಂದು, ಮುಸ್ಲಿಂ, ಬೌದ್ಧ, ಕ್ರಿಶ್ಚಿಯನ್ ಹೀಗೆ ಬೇರೆ ಬೇರೆ ಧರ್ಮ–ಜನಾಂಗ–ಜಾತಿಗಳಿದ್ದರೂ ಒಗ್ಗಟ್ಟಿನಿಂದ ಇರುವುದು ನಮ್ಮ ದೇಶದ ವೈಶಿಷ್ಟ್ಯ. ಸಮಾಜಶ್ಯಾಸ್ತ್ರದ ಲಕ್ಷಣಗಳನ್ನು ನೋಡಿದಾಗ ಸಮಾನತೆ, ವೈವಿಧ್ಯತೆ, ಬಾಂಧವ್ಯತೆ, ಸಂಸ್ಕೃತಿ, ಪರಂಪರೆ ಮೊದಲಿನಿಂದಲೂ ವರ್ಣ ಪದ್ಧತಿ, ಜಾತಿ ಪದ್ಧತಿಗಳಿದ್ದರೂ ನಮ್ಮ ಸಮಾಜ ಜ್ಯಾತ್ಯಾತೀತ ರಾಷ್ಟ್ರವಾಗಿದೆ. ಇಂತಹ ಸಮಾಜದಲ್ಲಿ ಅನ್ಯರಾಷ್ಟ್ರ ರಾಜ್ಯಗಳ ಜನರನ್ನು 'ಅತಿಥಿದೇವೋ ಭವ' ಎಂಬ ದೃಷ್ಟಿಯಿಂದ ಕಾಣುತ್ತಾರೆ. ಇಂತಹ ನಮ್ಮ ಭಾರತೀಯ ಸಮಾಜವನ್ನು ಮುಸ್ಲಿಂ ಲೇಖಕರು ಹೇಗೆ ಚಿತ್ರಿಸಿದ್ದಾರೆ ಎಂಬುದನ್ನು ಈ ಲೇಖನದಲ್ಲಿ ವಿವರಿಸಲಾಗಿದೆ.*

**ಮುಖ್ಯಪದಗಳು (Keywords):** ಭಾರತೀಯ ಸಮಾಜ, ಭಾರತೀಯತೆ, ಕನ್ನಡ ಸಾಹಿತ್ಯ, ಇಸ್ಲಾಂ ಲೇಖಕರು.

## ಪೀಠಿಕೆ

ಭಾರತೀಯ ಸಮಾಜವು ಬಹು ಪ್ರಾಚೀನವಾದದ್ದು ಮತ್ತು ಅತ್ಯಂತ ಸಂಕೀರ್ಣ ರಚನೆಯುಳ್ಳದ್ದು. ಒಂದು ಅಂದಾಜಿನ ಪ್ರಕಾರ ಮೊತ್ತಮೊದಲ ನಾಗರಿಕತೆಯ ಕಾಲದಿಂದ ಮೊದಲುಗೊಂಡು ಸುಮಾರು 5000 ವರ್ಷಗಳ ಸುದೀರ್ಘ ಕಾಲಾವಧಿಯನ್ನು ಅದು ಕ್ರಮಿಸಿದೆ. ಈ ಅವಧಿಯಲ್ಲಿ ಬೇರೆ ಬೇರೆ ಕ್ಷೇತ್ರದ ಅನೇಕಾನೇಕ ಮಹನೀಯರು ಭಾರತೀಯ ಸಮಾಜದ ಕುರಿತು ತಮ್ಮದೇ ರೀತಿಯಲ್ಲಿ ಅಧ್ಯಯನ ಮಾಡಿ ವ್ಯಾಖ್ಯಾನಿಸಿದ್ದಾರೆ. ಈ ಲೇಖನದಲ್ಲಿ ಸಾಹಿತಿಗಳು ವಿಶೇಷವಾಗಿ ಮುಸ್ಲಿಂ ಸಮುದಾಯಕ್ಕೆ ಸೇರಿದ ಲೇಖಕರು ಭಾರತೀಯ ಸಮಾಜವನ್ನು ನೋಡಿರುವ ಬಗೆಯನ್ನು ಅಧ್ಯಯನ ಮಾಡಲಾಗಿದೆ.

## ಕೆ.ಎಸ್.ನಿಸಾರ್ ಅಹಮ್ಮದ್

ನಿತ್ಯೋತ್ಸವದ ಕವಿ ಎಂದೇ ಖ್ಯಾತಿ ಪಡೆದ ಕವಿ ಕೆ.ಎಸ್. ನಿಸಾರ್ ಅಹಮ್ಮದ್ ಭೂಗರ್ಭಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದ ಲೇಖಕರು. ಇವರು ಎಡಪಂಥೀಯ ವಿಚಾರಧಾರೆಗಳನ್ನು ಮೈಗೂಡಿಸಿಕೊಂಡವರು 12 ಕ್ಕಿಂತಲೂ ಹೆಚ್ಚು ಕವನ ಸಂಕಲನಗಳನ್ನು ಬರೆದಿದ್ದಾರೆ. ಜೊತೆಗೆ ಕಾದಂಬರಿ ಸಾಹಿತ್ಯ, ವಿಮರ್ಶೆ, ವಿಚಾರ ಸಾಹಿತ್ಯ, ಅನುವಾದ, ಸಂಪಾದನೆಯಂತಹ ಪ್ರಕಾರಗಳಲ್ಲಿ ಸಾಹಿತ್ಯ ಕೃಷಿ

*Please cite this article as: ವಿಜಯಮಾಲಾ ನಾಗನೂರಿ.* (2024). ಇಸ್ಲಾಂ ಲೇಖಕರ ದೃಷ್ಟಿಯಲ್ಲಿ ಭಾರತೀಯ ಸಮಾಜ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 5(4). ಪು.ಸಂ.* 16–21

ಮಾಡಿದ್ದಾರೆ. ಮನಸ್ಸು ಗಾಂಧಿ ಬಜಾರ – ಎಂಬ ಕವನ ಸಂಕಲನದ ಮೂಲಕ ಸಾಹಿತ್ಯವನ್ನು ಪ್ರವೇಶಿಸಿದ ನಿಸಾರ್ ಅಹಮದ್, ಜನರ ಮನಸ್ಸನ್ನು ಬಲು ಬೇಗನೇ ಸೆಳೆದರು.

***ಅತಿ ಸನಾತನ ನಿನ್ನ ತಲೆಮಾರ ಚಾರಿತ್ರ್ಯ***
***ನಿನ್ನಲ್ಲಿ ಜನಿಸಿದುದೆ ನನಗೆ ಮಾನ್ಯ***
***ನಿರ್ಬಲನೆ ಇರಬಹುದು; ಕೇರಿದೊಡನೆಯ ತೂರಿ***
***ಬಿದ್ದಿ ಜಳ್ಳೇನಲ್ಲ; ಜೀವ ಧನ್ಯ*** (ಅತಿ ಸನಾತನ)

ಭಾರತವು ಇಂದು ನಿನ್ನೆಯದಲ್ಲ ಭಾರತವು ಬಹಳಷ್ಟು ಪುರಾತನ, ಹಳೆಯ ಇತಿಹಾಸವನ್ನು ಹೊಂದಿದೆ, ಭಾರತೀಯ ಚರಿತ್ರೆ, ಪರಂಪರೆ ವಿಶಿಷ್ಟತೆಯಿಂದ ಕೂಡಿದೆ. ಹಾಗೆಯೇ ಪ್ರತಿಯೊಬ್ಬ ಜೀವಿಯು ಇಂತಹ ನೆಲದಲ್ಲಿ ಹುಟ್ಟಿದ್ದಕ್ಕೆ ಪೂರ್ವ ಜನ್ಮದ ಪುಣ್ಯವೇ ಕಾರಣ ಎನ್ನಬಹುದು. ಉದಾ: ಗಾಂಧಿ, ಅಂಬೇಡ್ಕರ್, ವಿವೇಕಾನಂದ, ಬುದ್ಧ, ಬಸವಣ್ಣ ಅಂತಹ ಮಹನೀಯರನ್ನು ನೆನಪಿಸಿಕೊಳ್ಳಬೇಕು. ಇದನ್ನು ಇಂದಿನ ಬಂಡಾಯ ಸಾಹಿತ್ಯಗಳಾದ ಸರಜೂ ಅವರು ತಮ್ಮ ಉತ್ಖನನ ಕವನ ಸಂಕಲನದಲ್ಲಿ ಅದೃಷ್ಟ ಎಂಬ ಕವಿತೆಯಲ್ಲಿ ನನ್ನ ಅದೃಷ್ಟ ಚೆನ್ನಾಗಿತ್ತು. ನಾನು ಭಾರತದಲ್ಲಿ ಹುಟ್ಟಿದೆ ಎನ್ನುತ್ತಾರೆ.

ಸೂಮೂಹರ್ತ ಎಂಬ ಕವನ ಸಂಕಲನದಲ್ಲಿ ಇಂದಿನ ಸಮಾಜದಲ್ಲಿ ಬೇರು ಬಿಟ್ಟ ವಿಷಮತೆಯನ್ನು ಕುರಿತು ಚಿಂತನಪರ ಕವಿತೆಗಳ ವಿಡಂಬನೆ ಇರುವುದನ್ನು ನೋಡುತ್ತೇವೆ.

***"ಕಳಚಿ ದೇಶ ಸಮಾಜ ಧರ್ಮ ಮತ ವರ್ಗಗಳ"***
***ನಿರ್ಮಮತೆ ವಾಸ್ತವಿಕ,***
***ಕಳಚಿದ್ದನೆಣಸದಿರಿ ಹಾಕಿ ಲೆಕ್ಕಾಚಾರ***
***ಉಳಿದಿದ್ದು ವಾಸ್ತವಿಕ*** – (ವಾಸ್ತವಿಕ)

ಮತ ಧರ್ಮಗಳ ತಿಕ್ಕಾಟ ಏನಿದೆಯೋ ಅದನ್ನು ಬಿಡಬೇಕಾಗಿ ತಿಳಿಸುತ್ತಾರೆ. ಬರುವಾಗ ಬೆತ್ತಲೇ, ಹೋಗುವಾಗ ಬೆತ್ತಲೆ, ನಡುವೆ ಬಂದು ಹೋಗುವುದೆಲ್ಲ ಕತ್ತಲೇ ಅಂದರೆ ಶೂನ್ಯ. ಅದ ತಿಳಿಯಲಾರದ ಜನ ತಲೆಗೊಂದೊಂದು ಜಾತಿಗಳನ್ನೆಲ್ಲಾ ಮಾಡಿಕೊಂಡು ಕೋಮುಗಲಭೆಗಳನ್ನು ಒಂದು ನೆಪವಾಗಿಟ್ಟುಕೊಂಡು ಹೆಣ್ಣುಮಕ್ಕಳ ಮೇಲೆ ಸಲ್ಲದ ಅತ್ಯಾಚಾರದಂತಹ ಕೃತ್ಯಗಳನ್ನು ಎಸಗುವುದು ಎಷ್ಟು ಸಮಂಜಸ ಎಂಬುದನ್ನು ತಿಳಿಯಬೇಕು. ಮತ್ತು ಜನ ವಾಸ್ತವತೆಯನ್ನು ಮರೆತಿರುವುದಾಗಿ ಅದನ್ನು ತಿಳಿಸಲು ಅಥವಾ ನೆನಪಿಸುವ ಪ್ರಯತ್ನ ಮಾಡಿದ್ದಾರೆ.

***"ಹಿಂಸೆಗೆ ಅಹಿಂಸೆ ಕೆಡಕಿಗೆ ಒಳಿತು,***
***ಮಾಡದೆ ಹೋದರೆ ಬದುಕೇ ಕೊಳೆತು***
***ನಾರುವುದೆಂದವ – ಗಾಂಧಿ"*** – (ಜಯಂತ್ಯುತ್ಸವ)

ಸತ್ಯ ಮತ್ತು ಅಹಿಂಸಾ ತತ್ವಗಳನ್ನು ನಮ್ಮ ದೇಶದ ಕ್ಷೇಮಕ್ಕಾಗಿ ಗಾಂಧಿಜಿಯವರು ಸಾರಿದರು. ಇಂದಿನ ಸಮಾಜ ನಿಜವಾಗಿಯೂ ಸತ್ಯ ಮತ್ತು ಅಹಿಂಸೆ ಅರ್ಥಗಳನ್ನೇ ಮರೆಯುತ್ತಿವೆ ಎಂದರೂ ಏನೂ ತೊಂದರೆ ಇಲ್ಲ. ಉದಾ: ಭಾಷಾ ಕಲಹ, ಕರ್ನಾಟಕ – ಮಹಾರಾಷ್ಟ್ರ ಗಡಿವಿವಾದ ಸರಕಾರದ ಆಸ್ತಿಯನ್ನು ಹಾಳು

ಮಾಡುವುದು – ಹೆಣ್ಣು ಭ್ರೂಣಹತ್ಯೆ, ಮರ್ಯಾದೆ ಹತ್ಯೆಗಳಂತಹ ಸಮಸ್ಯೆಗಳು ಉದ್ಭವಿಸುತ್ತಿವೆ. ಸಬಕೋ ಸನ್ಮತಿ ದೇ ಭಗವಾನ್, ರಾಷ್ಟ್ರಗೀತೆಯಂತಹ ಹಾಡುಗಳಿಗೆ ಗೌರವ ನೀಡದಿರುವುದನ್ನು ನಾವು ನೋಡುತ್ತೇವೆ.

ರಾಜ್ಯಗಳ ನಡುವೆ ದೇಶ ಅನ್ಯ ದೇಶಗಳ ಜನರು ನಮ್ಮ ದೇಶಕ್ಕೆ ಬಂದರೆ ಎಂತಹ ಆತ್ಮೀಯತೆಯನ್ನು ಕಾಣುತ್ತೇವೆ. ಆದರೆ ನಮ್ಮ ನಮ್ಮವರೇ ಏಕೆ ಗುದ್ದಾಡಿ ಸಾಯುತ್ತಾರೆ ಎಂಬುದೇ ಎಂದು ವಿಚಿತ್ರ ಪ್ರಶ್ನೆಯಾಗಿದೆ. "ನಾನೆಂಬ ಪರಕೀಯ" ಕವನ ಸಂಕಲನದಲ್ಲಿ ಜಾತ್ಯತೀತ ರಾಷ್ಟ್ರ ಎಂದು ಕರೆಯುವ ದೇಶದಲ್ಲಿ ನಾವೆಲ್ಲರೂ ಭಾರತೀಯರು ಎಂದು ಹೇಳುತ್ತಾ ಅನ್ಯ ಮನಸ್ಥಿತಿಯನ್ನು ತಾಳೋದು ಬಹು ಕಷ್ಟದ ಕೆಲಸ ಎನ್ನುತ್ತಾರೆ ನಿಸ್ಸಾರ್ ಅಹಮದ್‌ರವರು.

'ಅಮ್ಮ ಆಚಾರ ನಾನು ಕವಿತೆಯಲ್ಲಿ' ಸಂಪ್ರದಾಯ ಪದ್ಧತಿಯನ್ನು ಎತ್ತಿ ಹಿಡಿವ ಮುಸ್ಲಿಂ ಧರ್ಮದ ಸಂಸ್ಕೃತಿಯನ್ನು ಅಭಿವ್ಯಕ್ತಿಸುವ ಕ್ರಮ ಸೊಗಸಾಗಿ ಮೂಡಿದೆ. ಸಂಪ್ರದಾಯ ಎಂದರೆ, ಒಂದು ಪ್ರಚಲಿತವಾಗಿದ್ದ ಹಲವಾರು ಕಲ್ಪನೆಗಳು ವಿಚಾರಗಳಿಂದ ಅಂದರೆ ಸಂಪ್ರದಾಯದಿಂದ ಹೊರ ಬರುವುದು ಸಂಸ್ಕೃತಿ–ವ್ಯರ್ಥವೆಂಬುದನು ಕವಿತೆ ಧ್ವನಿಸುತ್ತದೆ. ಬುರ್ಖಾ ಪದ್ಧತಿಯ ಶಿಷ್ಟಾಚಾರದ ಕುರಿತು ಹುಡುಗಾ ಹುಡುಗಿ ಆಧುನಿಕವಾಗಿದ್ದರೂ ಆಧುನಿಕ ಕಲ್ಪನೆಯ ಈ ಸಂಸ್ಕೃತಿಯನ್ನು ಮಾತ್ರ ಬಿಡುವುದಿಲ್ಲ.

***ಮೊದಲ ಸಲ ತಿರುಗಾಡಲು ಹೊರಟಾಗ***
***ನನ್ನಾಕೆ ತೋಳಿಲ್ಲದ ರವಿಕೆಯುಟ್ಟು***
***ಭಾರೀ ಸೀರೆಯನ್ನು ಸೊಂಟದ ಕೆಳಗೆ ಕಟ್ಟಿ***
***ಕೊರಳಿಗೆ ಚಿನ್ನದ ಸರ***
***ಕಾಲಿಗೆ ಹೈಹೀಲ್ಡ ಕೆರ***
***ಕಿವಿಗೆ ಬರಳಿಗೆ ಉಂಗುರ ತೊಟ್ಟು***
***ಲಿಪಿಸ್ಟಿಕ್ಕು ಪೌಡರು ರೂಜು ಬಳಿದು, ದೃಷ್ಟಬೋಟ್ಟಿಟ್ಟು***
***ಹೆರಳಗೋಪುರದಲ್ಲಿ ಕೊದಲು ಬಿಗಿದು***
***ಎಡ ಬೈತಲೆ ತೆಗೆದು***
***ಇವೆಲ್ಲವನ್ನು ಮೀರಿಸುವ ಮುಗಳ್ನಗೆ ತೀಡಿ***
***ಹೊಸಿಲ ಇನ್ನೇನು ದಾಟಬೇಕು – ಆಗ***
***ಬಂದೆ ತಡೆಯಿರಿ ಎಂದು ಹೇಳಿ ಒಳಗೋಡಿ***
***ಬಂದು ನಡೆಯಿರಿ' ಎಂದಾಗ***
***ಕವಿಗೆ: ತಲೆಸುತ್ತಿ ನಾಲಿಗೆ ಬಿತ್ತಿ ನನಾದೆ ಮೂಕ***
***ನೋಡಿದಿರೆ.***
***ಉಟ್ಟಿದ್ದಳು ನಮ್ಮಮ್ಮನ್ನ ಬುರ್ಖಾ.***

ಮನುಷ್ಯ ಎಷ್ಟೇ ಆಧುನಿಕ ಯುಗದಲ್ಲಿ ಸಂಚರಿಸಲಿ ಎಷ್ಟೇ ಉನ್ನತ ಶಿಕ್ಷಣವನ್ನು ಪಡೆದಿರಲಿ ಮತ್ತೆ ಅವರು, ಸಂಪ್ರದಾಯವಾದಿಗಳಾಗಿರುವುದನ್ನು ಮತ್ತು ಸಮಾಜ ಸಂಪ್ರದಾಯಸ್ಥ ಸಮಾಜವಾಗಿರುವ

ಅಂಶವನ್ನು ನಾವು ಇಲ್ಲಿ ಕಾಣುತ್ತೇವೆ. ತಲತಲಾಂತರದಿಂದ ಸಮಾಜದಲ್ಲಿ ಸಾಮಾಜಿಕ ನಿಯಮದನ್ವಯ ಬೆಳೆದುಕೊಂಡು ಬಂದ ಅನೌಪಚಾರಿಕ ವಿಧಾನಗಳು ಅಥವಾ ಪದ್ಧತಿಗಳು ರೂಢಿಗತ ಸಂಪ್ರದಾಯವನ್ನು ಮರೆಯುವವರಿಗೆ ಶಿಕ್ಷೆಯೂ ಇದೆ.

**ಸಾರಾ ಅಬೂಬ್ಕರ ಪಯಣ ಕಥಾಸಂಕಲನದ ಕುರಿತು**

ಜೂನ್ 30, 1936 ಕೇರಳದ ಕಾಸರಗೋಡಿನಲ್ಲಿ ಹುಟ್ಟಿದರು. ಚಂದ್ರಗಿರಿಯ ತೀರದಲ್ಲಿ ಕಾದಂಬರಿಯ ಮುಖಾಂತರ ಕನ್ನಡ ಸಾಹಿತ್ಯವನ್ನು ಪ್ರವೇಶಿಸುವುದರ ಮೂಲಕ ಪ್ರಖ್ಯಾತಿಯನ್ನು ಪಡೆದಿದ್ದಾರೆ. ಕನ್ನಡ ಸಾಹಿತ್ಯದಲ್ಲಿ ಮುಸ್ಲಿಂ ಜನಾಂಗದ ಸಂವೇದನೆಗಳು ಅದರದಲ್ಲಿಯೂ ಮಹಿಳೆಯರ ನೋವು ನಲಿವುಗಳನ್ನು ಅಭಿವ್ಯಕ್ತಿಸಿದ ಶ್ರೇಷ್ಠ ಲೇಖಕಿ. 1) ಸಹನಾ, 2) ವಜ್ರಗಳು, 3) ತಳ ಒಡೆದ ದೋಣಿಯಲ್ಲಿ ಕಾದಂಬರಿಗಳು, 4) ಚಪ್ಪಲಿಗಳು, 5) ಪಯಣ ಮತ್ತು ಇತರ ಕಥೆಗಳು ಪುರಾತನ ಭಾರತದಿಂದಲೂ ಇಲ್ಲಿಯ ತನಕ ಸಮಾಜ ಮಹಿಳೆಯನ್ನು ಯಾವ ರೀತಿ ಕಾಣುತ್ತದೆ ಎಂಬ ಬಗ್ಗೆ ವಿವರಿಸುತ್ತಾರೆ.

ಕ್ರಿ.ಶ.5ನೇ ಶತಮಾನದ ವೇಳೆಗೆ ಸತಿಪದ್ಧತಿ, ಹೆಚ್ಚು ರೂಢಿಗೆ ಬಂದಿತ್ತು. ಸಮಾಜ ಮೂಢನಂಬಿಕೆಗಳಿಂದ ಆವೃತ್ತವಾಗಿತ್ತು. ನಮ್ಮ ಸಮಾಜದಲ್ಲಿ ಪುರಾತನ ಕಾಲದಿಂದಲೂ ಇತ್ತೀಚಿನವರೆಗೆ ಹೆಣ್ಣು ಬಲಿಯಾದದ್ದಿದೆ. ಹೆಣ್ಣಿನ ಕೊಲೆಯೂ ಕೂಡ ಸಂಪ್ರದಾಯವಾಗುವುದನ್ನು ಭಾರತೀಯ ಸಮಾಜದಲ್ಲಿ ಕಾಣಲು ಸಾಧ್ಯ. ಗಂಡನಿಲ್ಲದ ಹೆಣ್ಣಿನ ಅಸ್ತಿತ್ವವನ್ನು ಹಾಗೂ ಅವಳ ಬದುಕಿನ ಅರ್ಥವಂತಿಕೆಯನ್ನು ನಿರಾಕರಿಸುವ ಸಮಾಜ ಗಂಡನ ಶವದೊಂದಿಗೆ ಹೆಂಡತಿಯನ್ನು ಚಿತೆಗೇರಿಸಲು ಮಾಡಿಕೊಂಡ ಸಾಂಪ್ರದಾಯಿಕ ಆಚರಣೆ ಸತಿ ಹೋಗುವುದು" "ಪಯಣ ಇತರ ಕಥೆಗಳಲ್ಲಿ ಮೊದಲನೆಯ ಕಥೆಯ ಪಯಣ ಕಥೆಯಲ್ಲಿ ಕಥಾ ನಾಯಕಿ ಗಾಡಿಯಲ್ಲಿ ಪ್ರಯಾಣ ಮಾಡುತ್ತಿರುವಾಗ ದೂರದಲ್ಲಿ ಬಾನೆತ್ತರಕ್ಕೆ ಅಗ್ನಿಯು ಚಾಚಿದ್ದನ್ನು ಕಂಡು ಅವಳು ಜರನ್ನು ಕೇಳುತ್ತಿದ್ದಾಳೆ. "ಅಲ್ಲಿ ಏನಾಗುತ್ತಿದೆ" ಅಲ್ಲೋರ್ವ ಮಹಿಳೆಯು ಸಹಗಮನ ಮಾಡುತಿದ್ದಾಳೆ ಎಂದು ಉತ್ತಿರಿಸಿದಳು ಎಲ್ಲಿ! ಎಲ್ಲಿ! ಹೆಣ್ಣೋರ್ವಳನ್ನು ಜೀವಂತ ದಹನ ಮಾಡಿದವರಾರು? ಹಿಡಿಯಿರಿ ಅವರನ್ನು ಶಿಕ್ಷಿಸಿರಿ! ಅವರನ್ನು ಪುರುಷರು ಅದರಲ್ಲೇನು ತಪ್ಪಿಲ್ಲ ಎಂದಾಗ ಕಥಾ ನಾಯಕಿ ಮೂಗಿನ ಮೇಲೆ ಬೆರಳಿಟ್ಟುಕೊಂಡಳು. ಸತಿ ಪದ್ಧತಿಯನ್ನು ನಿಷೇಧಿಸುವ ಕಾನೂನು 1826 ಡಿಸೆಂಬರನಲ್ಲಿ ಬ್ರಿಟಿಷ ಸರ್ಕಾರ ಜಾರಿಗೆಗೊಳಿಸಿತು. ರಾಜಾರಾಮ್ ಮೋಹನ್‌ರಾಯ ಅವರು ಇದರ ವಿರುದ್ಧ ಹೋರಾಟ ಮಾಡಿದರು.

***"ಊರು ಮುಂದಿನ ಭಾಂವಿ ಯಾರು ತೋಡಿದರೇನು.***
***ಕಾಲು ಜಾರಿದರೆ ಕೈಲಾಸ***
***ಹೆಣ್ಣಿನ ಮನವೂ ಜಾರಿದರೆ ವನವಾಸ"***

ಸಮಾಜ ಹೆಣ್ಣನ್ನು ನೋಡತತ್ತಕ್ಕಂತಹ ಸ್ಥಿತಿ ಬಟ್ಟೆ ಮುಳ್ಳಿನ ಮೇಲೆ ಬೀಳಲಿ ಅಥವಾ ಮುಳ್ಳೇ ಬಂದು ಬಟ್ಟೆ ಮೇಲೆ ಬಿದ್ದರೂ ನೋವು ಹೆಣ್ಣಿಗೆ. ಇಂತಹ ನೋವುಗಳನ್ನು ಶತಮಾನಗಳಿಂದ ಎಷ್ಟೋ ಹೆಣ್ಣು ಮಕ್ಕಳು ಅನುಭವಿಸಿದ್ದಾರೆ. ಅನುಭವಿಸುತ್ತಿದ್ದಾರೆ. ಇಂದಿನ ದಿನಮಾನಗಳಲ್ಲಿ ಮನುಷ್ಯ ಮನುಷ್ಯನಾಗಿ ಉಳಿದಿಲ್ಲ. ವ್ಯಾಪಾರಿ ಮನೋಭಾವವನ್ನು ಹೊಂದಿದ್ದಾನೆ. ಅದರಲ್ಲಿಯೂ ಪುರುಷ ವರ್ಗ ಹೆಚ್ಚಾಗಿ ಈ ಧೋರಣೆಯನ್ನು ಹೊಂದಿದೆ. ಒಂದು ವೇಳೆ ಹೆಣ್ಣು ತಾನು ಜಾಗೃತವಾಗಿರದಿದ್ದರೆ ಅಥವಾ ಎಚ್ಚರ ತಪ್ಪಿದರೆ, ನೋವನ್ನು ಅನುಭವಿಸಬೇಕಾಗುತ್ತದೆ.

ಉದಾ: ಪಯಣ ಕಥೆಯಲ್ಲಿ ಕಥಾ ನಾಯಕಿ ಗಾಡಿಯಲ್ಲಿ ಪ್ರಯಾಣ ನಡೆಸುತ್ತಿರುವಾಗ ಅಪರಿಚಿತ ವ್ಯಕ್ತಿಯೊಬ್ಬ, ಕ್ಷಮಿಸಿ ನಾನಿಲ್ಲಿ ಕೂತುಕೊಳ್ಳಬಹುದೇ ಎಂದಾಗ ಅದಕ್ಕೆ ನನ್ನ ಅನುಮತಿಯ ಅಗತ್ಯವಿದೆಯೇ? ಎಂದು ಕೇಳುತ್ತಾಳೆ, ಅಲ್ಲಿಂದ ಸಂಭಾಷಣೆ ಪ್ರಾರಂಭವಾಯಿತು. ಸ್ಥಳವನ್ನು ಆಕ್ರಮಿಸಿದವನು ಮನಸ್ಸನ್ನು ಆಕ್ರಮಿಸುವ ಪ್ರಯತ್ನ ಮಾಡಿದ ಕೊನೆಗೆ ಪ್ರಯಾಣದ ಒಂದು ಗಂಟೆಯಲ್ಲಿಯೇ ಅವಳಿಗೆ ಮೋಸ ಮಾಡಿ ಹೋದ ಹೆಣ್ಣಿನ ಮನಸ್ಸನ್ನು ಇಲ್ಲಿ ಪರಿಗಣಿಸಬೇಕು. 1 ಗಂಟೆಯಲ್ಲಿ ಭೆಟ್ಟಿಯಾದ ಪುರುಷನ ಬಗ್ಗೆ ಅವಳು ಮನಸ್ಸು ಅತೀತವಾದ ಅನುಭವವನ್ನು ಹೊಂದುತ್ತದೆ. ಇಂತಹ ಕ್ರೂರ ಸಮಾಜದಲ್ಲಿ ಹೆಣ್ಣು ಭಾವನಾ ಮುಖಿಯಾಗಲಾರದೇ ವ್ಯಾಪಾರಿ ಮನೋಭಾವ ಹೊಂದುವುದು ಅವಶ್ಯಕತೆ ಇದೆ. ಬೆರಳನ್ನು ತೋರಿಸಿದರೆ ಹಸ್ತವನ್ನೇ ನುಂಗುವ ಜನ, ಅಥವಾ ಮನೆಯಲ್ಲಿ ಜಾಗ ಕೊಟ್ಟರೆ ವಠಾರವೆಲ್ಲಾ ನಂದೇ ಎನ್ನುವಂತಹ ಸ್ವಭಾವ ಇನ್ನೊಬ್ಬರ ಗೋರಿಯ ಮೇಲೆ ಸಾಮ್ರಾಜ್ಯವನ್ನು ಕಟ್ಟಿ ಆಳುವ ಜನದೃಷ್ಟಿಯನ್ನು ಗಮನಿಸಬೇಕು.

**ವಿವಾಹ ಪದ್ಧತಿ**

ಭಾರತೀಯ ಸಮಾಜದಲ್ಲಿ ವಿವಾಹಕ್ಕೆ ಬಹಳಷ್ಟು ಪವಿತ್ರವಾದ ಸ್ಥಾನಮಾನಗಳಿವೆ, "Marriages are made in heaven" ಆದರೆ ಮುಸ್ಲಿಂ ಧರ್ಮಗಳಲ್ಲಿ ವಿವಾಹ ಪದ್ಧತಿ ಮೂರು ಬಾರಿ ಖುಬುಲ ಹೈ ಅಂದರೆ ಮದುವೆ ಮುಕ್ತಾಯ, ಮೂರು ಸರತಿ ತಲಾಖ ಎಂದು ಹೇಳುವುದರ ಜೊತೆಗೆ, ಸಂಬಂಧ ಮುಕ್ತಾಯ, ಮುಸ್ಲಿಂ ಧರ್ಮಿಯರು ಬೇಕಾದಷ್ಟು ವಿವಾಹಗಳನ್ನು ಮಾಡಿಕೊಳ್ಳಬಹುದು.

ಪಯಣ ಕಥೆಯಲ್ಲಿ ಇನ್ನೊಂದು ಕಥೆ ಧ್ವನಿಯಿಲ್ಲದ ನೋವುಗಳು: ಮದುವೆಗೆ, ಸಿದ್ಧನಾದ ಹುಡುಗನಿದ್ದರೆ ನಮ್ಮಲ್ಲಿ ಹುಡುಗಿಯರಿಗೆ ಬರಗಾಲವೇ ಯಾವ ಪದಾರ್ಥದ ಅಭಾವವಿದ್ದರೂ ವಿವಾಹಯೋಗ್ಯಳಾದ ಕನ್ಯೆಗೆ ಅಭಾವಿಲ್ಲವಲ್ಲ, ಇಂದು ಮಾರುಕಟ್ಟೆಯಲ್ಲಿ ದೊರೆಯುವ ಅತೀ ಅಗ್ಗದ ವಸ್ತುವೆಂದರೆ, ಅದುತಾನೆ? ಅಂದರೆ ಹೆಣ್ಣು ಭಾರತೀಯ ಸಮಾಜದಲ್ಲಿ ಹೆಣ್ಣು ಮಾರುಕಟ್ಟೆಯ ಒಂದು ಸರಕಾಗಿರುವುದನ್ನು ನಾವು ಕಾಣಬಹುದು ಸಮಾಜ ಅವಳನ್ನು ಮನುಷ್ಯಳನ್ನಾಗಿ ಕಾಣುವ ಬದಲಾಗಿ, ಒಂದು ವಸ್ತುವಿನ ರೀತಿಯಲ್ಲಿ ನೋಡುತ್ತದೆ. ಎಂಥಹ ಸೋಜಿಗ ನೋಡು, ಭ್ರೂಣಹತ್ಯೆ, ಹೆಣ್ಣು ಶಿಶುಹತ್ಯೆಗಳಂತಹ ಸಮಸ್ಯೆಗಳಲ್ಲಿ ಹೆಣ್ಣಿನ ಅಸ್ತಿತ್ವವೇ ಇಲ್ಲದಂತಾಗಿದೆ. ಸಮಾಜದಲ್ಲಿ ಒಬ್ಬ ವ್ಯಕ್ತಿ 4–5 ವಿವಾಹಗಳನ್ನು ಮಾಡಿಕೊಳ್ಳುವುದು ಮತ್ತು ಭಾರತದ ಜನಗಣತಿಯ ಪ್ರಕಾರ 100 ಜನ ಗಂಡುಗಳಿಗೆ 97, 98 ಹೆಣ್ಣು ಮಕ್ಕಳು ಸಂಖ್ಯೆ ದೇಶದ ಸ್ಥಿತಿ ಹೀಗಿದ್ದಾಗಲೂ ಅಲ್ಲಿ ವಿವಾಹಕ್ಕಾಗಿಯೇ ವಿಶೇಷವಾಗಿ ಹೆಣ್ಣುಗಳ ಅಭಾವ ತೋರಿದ್ದು.

ಸಮಾದಲ್ಲಿ ತಲೆದೋರಿರುವ ಇನ್ನೊಂದು ಪ್ರಮುಖವಾದ ಸಮಸ್ಯೆಯೆಂದರೆ ವರದಕ್ಷಿಣೆ, ಇದೊಂದು ಸಮಾಜಿಕ ಪಿಡುಗಾಗಿ ಕಂಡುಬರುತ್ತದೆ. ಇಂದಿನ ದಿನ ಪತ್ರಿಕೆಗಳನ್ನು ನೋಡಿದಾಗ ನಮಗೆ, ತಾಸಿಗೆ ಒಂದರಂತೆ ವರದಕ್ಷಿಣೆ ಸಾವುಗಳಾಗುತ್ತಿರುವುದು ಸಮಾಜಕ್ಕೆ ಒಂದು ಶೋಚನೀಯ ಸ್ಥಿತಿಯೇ.

ಪಯಣ ಎಂಬ ಕಥೆಯಲ್ಲಿ ಬರುವ "ಅಂಕುರ" ಕಥೆಯಲ್ಲಿ ಶಕೀಲಾ ಕಥಾ ನಾಯಕಿಗೆ ಅತ್ತೆಯ ಬಿರುನುಡಿಗಳನ್ನು ಗಮನಿಸಿ "ರಾಣಿಯಂತೆ ಕುಳಿತು ತಿನ್ನಲು ನೀನೇನು ವರದಕ್ಷಿಣೆ ತಂದಿದ್ದೀಯಾ" ಇಲ್ಲಿ ಶಕೀಲಾಳ ಬದುಕು ವರದಕ್ಷಿಣೆ ಎಂಬ ಕತ್ತಿಯ ಮೇಲೆ ತೂಗಾಡುವುದನ್ನು ಕಾಣುತ್ತೇವೆ. ಅತ್ತೆಯ ಜೊತೆಗೆ ಗಂಡ ಹೊಸ ಆಸ್ತಿಕೊಳ್ಳಲು ಮಾವನ ಹತ್ತಿರ ಸಹಾಯ ಕೇಳೋದು ವರನಿಗೆ ದಕ್ಷಿಣೆ ಕೊಡುವುದು ಇದು

ನಿನ್ನೆಯ ಸಂಸ್ಕೃತಿಯಲ್ಲ. ಪುರಾತನ ಕಾಲದ ಪದ್ಧತಿ, ಇದು ಇಂದು ಹೊಸ ರೂಪವನ್ನು ಪಡೆದಿದೆ. ಇದರಲ್ಲಿ ಮಹಿಳೆಯರು ಅಸಂಖ್ಯಾತ ರೀತಿಯಲ್ಲಿ ಸಾಯುವುದನ್ನು ಕಾಣುತ್ತೇವೆ ನರಳುವುದನ್ನು ನೋಡುತ್ತೇವೆ.

ಎಂದೂ ಮಾತನಾಡಲಾರದ ಹೆಣ್ಣು ಅವಳಿಗೆ ಅನೇಕ ರೀತಿಯಲ್ಲಿ ಅತ್ತೆಯಿಂದ, ಭಾವಮೈದನನಾದ ಕರೀಮನಿಂದ ಶೋಷಣೆಗಳಾಗುತ್ತವೆ. ಕೊನೆಗೆ ಅವಳ ಮೇಲೆ ಅನೈತಿಕ ಸಂಬಂಧದ ಆರೋಪ ಹೊರಿಸಿ ಮಕ್ಕಳನ್ನು ಕಸಿದುಕೊಂಡು ಹೊರಗೆ ಹಾಕಲಾಗುತ್ತದೆ. ಆಗ ಅವಳ ಮನಸ್ಸಿನಲ್ಲಿ ಮೊಟ್ಟಮೊದಲು ಉದ್ಭವಿಸುವ ಪ್ರಶ್ನೆ ಯಾವುದು ಧರ್ಮ! ಎಂದು ಮಕ್ಕಳು ಹುಟ್ಟಿ ಎರಡು ವರ್ಷಗಳಾದರೂ ಮಕ್ಕಳ ಮುಖವನ್ನು ನೋಡಲಾರದ ಸಲೀಮ ಮಕ್ಕಳಿಗೂ ನಿನಗೂ ಯಾವ ಸಂಭಂಧವಿಲ್ಲ ಎಂದು ಹೊರಹಾಕುವುದು ಇದು ಹೇಗೆ ಧರ್ಮ. ನ್ಯಾಯದಿಂದ ನಡೆಯುವುದಕ್ಕೆ ನ್ಯಾಯ ಎಲ್ಲಿದೆ ಎಂದು ಪ್ರಶ್ನಿಸುತ್ತಾಳೆ.

ಈ ರೀತಿಯಾಗಿ ಸಾರಾ ಅವರ ಸಾಹಿತ್ಯ ಇನ್ನು ಅಪಾರವಾಗಿದೆ. ಅವರ ಕೃತಿಗಳಲ್ಲಿ ಮುಸ್ಲಿಂ ಕೌಟುಂಬಿಕ ನೆಲೆಗಳಲ್ಲಿ ಮಹಿಳೆಯರ ತೀವ್ರ ಸಂವೇದನೆಗಳನ್ನು ಕಾಣಬಹುದಾಗಿದೆ. ಒಟ್ಟಿನಲ್ಲಿ ಸಮಾಜವು ಹೆಣ್ಣನ್ನು ಹೆಣ್ಣಾಗಿ ಅಥವಾ ಒಬ್ಬ ಮನುಷ್ಯಳನ್ನಾಗಿ ಕಾಣುವ ಮನೋಭಾವ ಬೆಳೆಯಬೇಕಾದ ಅವಶ್ಯಕತೆ ಇದೆ.

**ಆಕರ ಗ್ರಂಥಗಳು**


- ನಿಸಾರ್ ಅಹಮ್ಮದ್. ಕೆ.ಎಸ್. (2016). *ಮನಸ್ಸು ಗಾಂಧಿ ಬಜಾರ.* ಸಪ್ನ ಬುಕ್ ಹೌಸ್, ಮೈಸೂರು.
- ನಿಸಾರ್ ಅಹಮ್ಮದ್. ಕೆ.ಎಸ್. (1972). *ನಾನೆಂಬ ಪರಕೀಯ.* ಅಕ್ಷರ ಪ್ರಕಾಶನ, ಸಾಗರ.
- ಸಾರಾ ಅಬೂಬ್ಕರ. (1992). *ಪಯಣ ಮತ್ತು ಇತರ ಕಥೆಗಳು.* ಪುಸ್ತಕ ಪ್ರಕಾಶನ, ಮೈಸೂರು.